ಅ) ಈ ವರ್ಷದಲ್ಲಿ ಈ ಕಟ್ಟಡದ ಶಂಕು ಸ್ಥಾಪನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಲಾಗುವುದೇ ?

ಇ) ಈ ಯೋಜನೆಗೆ ಬೇಕಾದ ಹಣವೆಷ್ಟು ?

ಶ್ರೀ ಎಸ್.ಆರ್ ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು.)—

ಅ) ಇತ್ತೀಚೆಗೆ ಅಂದರೆ, ಏಪ್ರಿಲ್ ೧೯೮೬ ರಲ್ಲಿ ಮಾತ್ರ ನಿವೇಶನವನ್ನು ಸ್ವಾಧೀನಕ್ಕೆ ಪಡೆಯಲು ಸಾಧ್ಯವಾಯಿತು. ಆದುದರಿಂದ, ಕಟ್ಟಡದ ಕಾರ್ಯ ಅಷ್ಟು ಪ್ರಗತಿದಾಯಕವಾಗಿಲ್ಲ.

ಆ) ಇದನ್ನು ಪರಿಶೀಲಿಸಲಾಗುವುದು.

ಇ) ಈ ಕಟ್ಟಡದ ನಕಾಶೆ ಮತ್ತು ಅಂದಾಜುಪಟ್ಟಿ ತಯಾರಿಸಿದ ನಂತರ ತಿಳಿಯುವುದು.

ಇನಾಮು ಜಮೀನುಗಳನ್ನು ಸಹಕಾರಿ ಅಥವಾ ಸರಕಾರಿ ಸಾಲಗಳನ್ನು ತೀರಿಸಲು ಮಾರಲು ಅನುಮತಿ ನೀಡುವ ಬಗ್ಗೆ

೮೧ (೪೧೯) ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಇನಾಮು ಜಮೀನುಗಳನ್ನು ಸಹಕಾರಿ ಅಥವಾ ಸರಕಾರದ ಸಾಲ ತೀರಿಸಲು ಮಾರಲು ಅನುಮತಿ ನೀಡಲಾಗುವುದೇ ?

ಆ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಕಾಯ್ದೆಗೆ ತಿದ್ದುಪಡಿ ಮಾಡಿ ಈ ಸವಲತ್ತು ಕೊಡಲು ಸರಕಾರದ ವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

ಅ) ಕರ್ನಾಟಕ (ಗ್ರಾಮಾಧಿಕಾರಿಗಳ ರದ್ದಿಯಾತಿ ಕಾಯ್ದೆ ೧೯೬೧ ಸೆಕ್ಷನ್ ೫(೩)ರನ್ವಯ ೭-೮-೭೮ ರಿಂದ ಸೇವಾ ಇನಾಂ ಜಮೀನುಗಳನ್ನು ೧೫ ವರ್ಷಗಳವರೆಗೆ ಪರಭಾರೆ ಮಾಡಲಂ ನಿರ್ಬಂಧಿಸಲಾಗಿದೆ. ಆದ್ದರಿಂದ ಜಮೀನುಗಳನ್ನು ಮಾರಲು ಅನುಮತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಕಾಯ್ದೆಗೆ ಈ ಬಗ್ಗೆ ತಿದ್ದುಪಡಿ ಮಾಡುವ ಪ್ರಸ್ತಾವವು ಸರ್ಕಾರದ ಮುಂದೆ ಇರುವುದಿಲ್ಲ.

ಸರಕಾರಿ ನೀರಾವರಿ ಯೋಜನೆಗಳಿಗಾಗಿ ವಶಪಡಿಸಿಕೊಂಡಿರುವ ಜಮೀನುಗಳ ಕಿಮ್ಮತ್ತಿನ ಬಗ್ಗೆ

೮೨ (೧೦೭) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ರಾಜ್ಯದಲ್ಲಿ ಕೆರೆಗಳ, ಅಣೆಕಟ್ಟುಗಳ ನಿರ್ಮಾಣಕ್ಕಾಗಿ ವಶಪಡಿಸಿಕೊಂಡಿರುವ ಒಟ್ಟಾರೆ ಜಮೀನಿನ ಕ್ಷೇತ್ರವೆಷ್ಟು ?

ಆ) ಸರಕಾರಿ ನಿಯಮಾವಳಿ ಪ್ರಕಾರ ಮಾಡಿರುವ ಜಮೀನುಗಳ ಕಿಮ್ಮತ್ತು ಎಷ್ಟು ?

ಇ) ನ್ಯಾಯಾಲಯಕ್ಕೆ ಹೋಗಿ ಜಮೀನುಗಳ ಕಿಮ್ಮತ್ತು ಹೆಚ್ಚು ಮಾಡಿ ಸರಕಾರದಿಂದ ಪಡೆದಿರುವ ಒಟ್ಟಾರೆ ಹಣದ ಮೊತ್ತವೆಷ್ಟು ?

ಈ) ಜಮೀನು ಸ್ವಾಧೀನತೆಗಾಗಿ ಪ್ರತಿ ಎಕರೆಗೆ ಕೊನೆ ಪಕ್ಷ ೧೦,೦೦೦ ರೂಪಾಯಿ ಬೆಲೆ ನಿಗದಿ ಮಾಡುವುದು ಹಾಗೂ ಜಮೀನು ಕಳೆದುಕೊಂಡವರಿಗೆ ಸರಕಾರಿ ನೌಕರಿಯಲ್ಲಿ ಕಡ್ಡಾಯವಾಗಿ ಸ್ಥಾನಗಳನ್ನು ಕಾಯ್ದಿರಿಸಲು ಕಾನೂನನ್ನು ಮಾಡುವುದು ಸರಕಾರದವರ ಪರಿಶೀಲನೆಯಲ್ಲಿದೆಯೇ ?

ಉ) ಕಾನೂನಿನ ಉಲ್ಲಂಘನೆ ಮಾಡಿ ಸರಕಾರದ ಸ್ವಾಧೀನದ ಜಮೀನುಗಳಲ್ಲಿ ಮರು ಸಾಗುವಳಿ ವಹಾಡುತ್ತಿರುವವರ ಮೇಲೆ ಕಾನೂನಿನ ಪ್ರಕಾರ ಕೈಗೊಳ್ಳುವ ಕ್ರಮವೇನು ?

ಶ್ರೀ ಎಸ್.ಟಿ. ಬೊಮ್ಮಾಯಿ, (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

ಅ) ೨,೦೮,೬೩೧ ಎಕರೆಗಳು.

ಆ) ರೂ. ೮೯,೩೭,೮೬,೧೭೩

ಇ) ರೂ. ೩೭,೦೨,೨೯,೭೪೬

ಈ) ಇಲ್ಲ.

ಉ) ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಾಗ ಅವರನ್ನು ಸದರಿ ಸ್ಥಳದಿಂದ ಬಿಡಿಸಲು ಕ್ರಮ ತೆಗೆದುಕೊಳ್ಳುವುದು.

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಗಿರಿಜನರಿಗೆ ಮೀಸಲಾಗಿಸಿರುವ ಭೂಮಿ

೮೩. (೩೫೯) ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಗಿರಿಜನರಿಗೆ ಮೀಸಲಾಗಿರಿಸಿರುವ ಭೂಮಿ ಎಷ್ಟು.—

ಆ) ಈ ಜನರಿಗೆ ಎಷ್ಟು ಜಮೀನನ್ನು ಸಾಗುವಳಿಗೆ ಕೊಡಲಾಗಿದೆ?

ಇ) ಉಳಿದಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಕರ್ನಾಟಕ ಭೂ ಮಂಜೂರಾತಿ ನಿಯಮ ೧೯೬೯ರ ಪ್ರಕಾರ ಗಿರಿಜನರಿಗೆ ಪ್ರತ್ಯೇಕವಾಗಿ ಮಂಜೂರಿಗಾಗಿ ಜಮೀನನ್ನು ಮೀಸಲಿಡುವ ಅವಕಾಶವಿಲ್ಲ. (ಒಟ್ಟಾಗಿ ಪರಿಜನ ಗಿರಿಜನರಿಗೆ ಒಟ್ಟು ಮಂಜೂರಾತಿಗೆ ಲಭ್ಯವಿರುವ ಜಮೀನಿನಲ್ಲಿ ೫೦% ಜಮೀನು ಮೀಸಲಿಡಲು ಅವಕಾಶವಿರುತ್ತೆ. ಅದರಂತೆ ಕಾಯ್ದಿರಿಸಲಾಗುತ್ತಿದೆ.)

ಆ) ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಇದುವರೆಗೆ ಭೂ ಮಂಜೂರಾತಿ ನಿಯಮದ ರೀತ್ಯಾ ೧೭೬೨ ಎಕರೆ ೦೭ ಗುಂಟೆ ಜಮೀನನ್ನು ಗಿರಿಜನರಿಗೆ ಮಂಜೂರು ಮಾಡಲಾಗಿದೆ.

ಇ) ಈ ತಾಲ್ಲೂಕಿನಲ್ಲಿ ಭೂ ಮಂಜೂರಾತಿ ನಿಯಮದ ರೀತ್ಯಾ ಮಂಜೂರಾತಿಗಾಗಿ ಹಾಲಿ ಯಾವುದೇ ಜಮೀನು ಲಭ್ಯವಿಲ್ಲ.

ಅಂಗವಿಕಲರ ಸೌಲಭ್ಯಗಳ ಬಗ್ಗೆ

೮೪ (೧೮೬) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸರ್ಕಾರದವರು ಎಷ್ಟು ಅಂಗವಿಕಲರಿಗೆ ಪಾಸಾಶನ ನೀಡುತ್ತಿದ್ದಾರೆ ?

ಆ) ಇದರಲ್ಲಿ ಪುರುಷರು ಮತ್ತು ಮಹಿಳೆಯರ ಸಂಖ್ಯೆ ಎಷ್ಟು ?

ಇ) ಅಂಗವಿಕಲರಿಗೆ ಸರ್ಕಾರದವರು ಕೊಡುತ್ತಿರುವ ಇತರ ಸೌಲಭ್ಯಗಳೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ೧೯೮೫-೮೬ನೇ ಸಾಲಿನಲ್ಲಿ ೧,೦೨,೯೯೦ ಅಂಗವಿಕಲರಿಗೆ ಪಾಸಾಶನ ಕೊಡಲಾಗಿದೆ. ಇದಕ್ಕೆ ೫,೯೦,೬೯,೯೦೫-೦೦ ರೂಪಾಯಿಗಳು ಖರ್ಚಾಗಿದೆ.

ಆ) ಇದಕ್ಕೆ ಮಾಹಿತಿಯು ತಕ್ಷಣದಲ್ಲಿ ಇರುವುದಿಲ್ಲ.

ಇ) ಈ ಕೆಳಕಂಡ ಸೌಲಭ್ಯಗಳನ್ನು ಸರ್ಕಾರದಿಂದ ಅಂಗವಿಕಲರಿಗೆ ಕೊಡಲಾಗುತ್ತಿದೆ.